ಇಂದು ದಿ: 28.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು 2 ರಿಂದ 8 ನೇ ಪ್ರತಿವಾದಿಗಳ ಪರಃ ಶ್ರೀ ಎಂ.ಎಸ್. ವಕೀಲರಿಂದ .

ದಿಃ 30.12.1974 ರ ನೊಂದಾಯಿತ ಮೃತ್ಯು ಪತ್ರ ಶೂನ್ಯ ಮತ್ತು ಅಕೃತವೆಂದು ಘೋಷಿಸಬೇಕೆಂದು ಪರಿಹಾರವನ್ನು ಕೇಳಿಲ್ಲ. ಸದರಿ ಮೃತ್ಯುಪತ್ರ ಶೂನ್ಯ ಅಥವ ಸೃಷ್ಟಿಸಿದ ದಾಖಲೆ ಎಂದು ನಮ್ಮ ದಾವೆಯಲ್ಲಿ ಹೇಳಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ವಾದ ಪತ್ರವನ್ನು ತಿದ್ದುಪಡೆ ಮಾಡಿಕೊಂಡಿಲ್ಲ. ನಮ್ಮ ತಾತ ಬೋಗಪ್ಪನ ತಂದೆಯ ಹೆಸರು ಬೋಗಪ್ಪ. ನಮ್ಮ ಮುತ್ತಾತ ಬೋಗಪ್ಪನಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಕರಿಯಮ್ಮ. ಸದರಿ ಕರಿಯಮ್ಮನಿಗೆ ತಿಮ್ಮಪ್ಪ ಎಂಬ ಒಬ್ಬನೇ ಮಗ. ಸದರಿ ತಿಮ್ಮಪ್ಪನಿಗೆ ತಿಮ್ಮಮ್ಮ ಎಂಬ ಅಕ್ಕ ಇದ್ದಳು ಎನ್ನುವುದು ನಿಜ. ಎರಡನೇ ಹೆಂಡತಿ ಕೆಂಗಮ್ಮ. ಸದರಿ ಕೆಂಗಮ್ಮನಿಗೆ ಮೂರು ಜನ ಮಕ್ಕಳು. ಅವರು ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ. ಸದರಿ ಬೋಗಪ್ಪ ನಮ್ಮ ತಾತ ಎನ್ನುವುದು ನಿಜ. ನಮ್ಮ ಮುತ್ತಾತ ಬೋಗಪ್ಪ ಇವನನ್ನು ಸಿದ್ದಜ್ಜಿ ಕೋಂ ಬಕಡಿ ತಿಮ್ಮಯ್ಯ ಇವಳು ಕರೆದುಕೊಂಡು ಬಂದು ಸಾಕಿದ್ದಳು ಎನ್ನುವುದು ನಿಜ. ನಮ್ಮ ಊರು ಮೂಲತಃ ಬಾಗಶೆಟ್ಟಿಹಳ್ಳಿ ಎನ್ನುವುದು ನಿಜ. ಬಾಗಶ್ಟೆಟ್ಟಿಹಳ್ಳಿಯಲ್ಲಿ ನಮ್ಮನ್ನು ಗೌಡ್ರ ಕರಿಯಪ್ಪನ ವಂಶಸ್ಥರು ಎಂದು ಕರೆಯುತ್ತಾರೆ ಎನ್ನುವುದು ನಿಜ. ನಮ್ಮ ಮುತ್ತಾತ ಬೋಗಪ್ಪ ನಿಗೆ ತಿಮ್ಮಪ್ಪ, ಕೆಂಚಪ್ಪ,ಕುಂಟಕರಿಯಪ್ಪ ಎಂಬ ಸಹೋದರರು ಇದ್ದರು ಎನ್ನುವುದು ಗೊತ್ತಿರುವುದಿಲ್ಲ. ಅವರೆಲ್ಲರು ಬಾಗಶೆಟ್ಟಿಹಳ್ಳಿಯಲ್ಲಿ ಇಗಲೂ ಇರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಅವರೆಲ್ಲರೂ ಆಸ್ತಿಯನ್ನು ಹಂಚಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ಮುತ್ತಾತ ಬೋಗಪ್ಪನಿಗೆ ಅಲ್ಲಿ ಯಾವುದೇ ಅಸ್ತಿಯನ್ನು ಕೊಟ್ಟಿಲ್ಲ. ಸಿದ್ದಜ್ಜಿಗೆ ಮಕ್ಕಳು ಇರಲಿಲ್ಲ ಎನ್ನುವುದು ನಿಜ. ಆದ ಕಾರಣ ನಮ್ಮ ಮುತ್ತಾತ ಬೋಗಪ್ಪನನ್ನು ಕರೆದುಕೊಂಡು ಬಂದು ಸಾಕಿದ್ದಳು ಎನ್ನುವುದು ನಿಜ. ಸಿದ್ದಜ್ಜಿಯ ಮೊದಲೇ ನಮ್ಮ ಮುತ್ತಾತ ಬೋಗಪ್ಪ ಮೃತಪಟ್ಟಿದ್ದ ಎನ್ನುವುದು ಗೊತ್ತಿರುವುದಿಲ್ಲ. ಸಿದ್ದಜ್ಜಿಯ ಆಸ್ತಿಗಳು ಬೋಕಿಕೆರೆ, ಮಳಲಿ

ಮತ್ತು ಚನ್ನಸಮುದ್ರ ದಲ್ಲಿ ಆಸ್ತಿಗಳು ಇದ್ದವು ಎನ್ನುವುದು ನಿಜ. ಬೋಕಿಕೆರೆಯಲ್ಲಿ ಸರ್ವೇನಂ. 71 ರಲ್ಲಿ 10 ಎಕರೆ 17 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಸರ್ವೇ ನಂ. 86 ರಲ್ಲಿ 1 ಎಕರೆ 25 ಗುಂಟೆ ಮತ್ತು 2 ಎಕರೆ 4 ಗುಂಟೆಯ ಸೀಳು ಇರುತ್ತವೆ ಎನ್ನುವುದು ನಿಜ. ಸರ್ವೇ ನಂ. 78 ರಲ್ಲಿ 25 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಸರ್ವೇ ನಂ. 87 ರಲ್ಲಿ 1 ಎಕರೆ ಜಮೀನು ಇರುತ್ತದೆ ಎನ್ನುವುದು ನಿಜ. ಚನ್ನಸಮುದ್ರದ ಸರ್ವೆ ನಂ. 36 ರಲ್ಲಿ 2 ಎಕರೆ 33 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಮಳಲಿಯಲ್ಲಿ ಸರ್ವೆ ನಂ. 253 ರಲ್ಲಿ 4 ಎಕರೆ 11 ಗುಂಟೆ ಜಮೀನು ಇರುತ್ತದೆ ಎನ್ನುವುದು ನಿಜ. ಈ ಎಲ್ಲಾ ಆಸ್ತಿಗಳು ಸಿದ್ದಜ್ಜಿಯ ಆಸ್ತಿಗಳು ಎನ್ನುವುದು ನಿಜ. ಈ ಎಲ್ಲಾ ಆಸ್ತಿಗಳನ್ನು ನಿಡಿಃ 56 ರಂತೆ ಭಾಗ ಮಾಡಿಕೊಂಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಬೋಗಪ್ಪನ ಮೊದಲನೇ ಹೆಂಡತಿಯ ಮಗ ತಿಮ್ಮಪ್ಪ ಇವನಿಗೆ ಸರ್ವೇ ನಂ. 79 ರಲ್ಲಿ 2 ಎಕರೆ 10 ಗುಂಟೆ, 86 ರಲ್ಲಿ 1 ಎಕರೆ, 87 ರಲ್ಲಿ 20 ಗುಂಟೆ, ಚನ್ನಸಮ್ರುದ ಸರ್ವೆ ನಂ. 36 ರಲ್ಲಿ 28 ಗುಂಟೆ, ಮಳಲಿ ಸರ್ವೇ ನಂ. 253 ರಲ್ಲಿ 1 ಎಕರೆ 1 ಗುಂಟೆ ಸದರಿ ಪಾಲು ವಿಭಾಗದಲ್ಲಿ ಬಂದಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಾತ ಬೋಗಪ್ಪನಿಗೆ ಸರ್ವೇ ನಂ. 79 ರಲ್ಲಿ 2 ಎಕರೆ 30 ಗುಂಟೆ, 86 ರಲ್ಲಿ 1 ಎಕರೆ 2 ಗುಂಟೆ, ಬೋಕಿಕೆರೆ ಸರ್ವೇ ನಂ. 78 ರಲ್ಲಿ 13 ಗುಂಟೆ, ಚನ್ನಸಮುದ್ರದ ಸರ್ವೆ ನಂ. 36 ರಲ್ಲಿ 28 ಗುಂಟೆ, 253 ರಲ್ಲಿ 1 ಎಕರೆ ಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾತ ಬೋಗಪ್ಪನ ಸಹೋದರ ಹನುಮಂತಪ್ಪ ಇವನಿಗೆ ಸರ್ವೇ ನಂ. 79 ರಲ್ಲಿ 2 ಎಕರೆ 12 ಗುಂಟೆ, ಬೋಕಿಕೆರೆ ಸರ್ವೇ ನಂ. 86 ರಲ್ಲಿ 25 ಗುಂಟೆ, 87 ರಲ್ಲಿ 20 ಗುಂಟೆ, ಚನ್ನಸಮುದ್ರದ ಸರ್ವೆ ನಂ. 36 ರಲ್ಲಿ 28 ಗುಂಟೆ, ಮಳಲಿ ಸರ್ವೇ ನಂ. 253 ರಲ್ಲಿ 1 ಎಕರೆ 5 ಗುಂಟೆ ಪಾಲು ವಿಭಾಗದಲ್ಲಿ ಭಾಗದಲ್ಲಿ ಬಂದಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಸಣ್ಣತಿಮ್ಮಪ್ಪನಿಗೆ ಸರ್ವೆ ನಂ. 79 ರಲ್ಲಿ 3 ಎಕರೆ 5 ಗುಂಟೆ, 86 ರಲ್ಲಿ 1 ಎಕರೆ 2 ಗುಂಟೆ, 78 ರಲ್ಲಿ 12 ಗುಂಟೆ, ಚನ್ನಸಮುದ್ರ ಸರ್ವೆ ನಂ. 36 ರಲ್ಲಿ 29 ಗುಂಟೆ, ಮಳಲಿ ಸರ್ವೆ ನಂ. 253 ರಲ್ಲಿ 1 ಎಕರೆ 5 ಗುಂಟೆ ಪಾಲು ವಿಭಾಗದಲ್ಲಿ ಭಾಗದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಷಯ

ನಮ್ಮ ತಾಯಿಗೆ ಮತ್ತು ಚಿಕ್ಕಮ್ಮನಿಗೆ ಗೊತ್ತು ಎಂದರೆ ಸರಿಯಲ್ಲ.

ನಮ್ಮ ವಾದ ಪತ್ರದ 5 ನೇ ಖಂಡಿಕೆಯಲ್ಲಿ ನಾವು ಬೇರೆ ಬೇರೆ ವಾಸಮಾಡುತ್ತಿದ್ದೇವೆ ಎಂದು ಹೇಳಿರುತ್ತೇವೆ ಎನ್ನುವುದು ನಿಜ. ನಮ್ಮ ತಂದೆಯನ್ನು ಕರಿಯಪ್ಪ ಮಾಚೇನಹಳ್ಳಿ ಎಂದು ಗುರುತಿಸುತ್ತಿದ್ದರು ಎನ್ನುವುದು ನಿಜ. ನಿಡಿಃ 1 ರಲ್ಲಿ ನಮ್ಮ ತಂದೆಯ ಸಹಿ ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ರೇವಣಸಿದ್ದಪ್ಪ ಇವನು ಬಸಮ್ಮನ ಗಂಡ ಎನ್ನುವುದ ನಿಜ. ಸದರಿ ರೇವಣಸಿದ್ದಪ್ಪ ಇವನು ನಿಡಿಃ 1 ರಲ್ಲಿ ಸಹಿ ಮಾಡಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ಸದರಿ ರೇವಣಸಿದ್ದಪ್ಪ ಇವನು ಸಿದ್ದಾರ್ಥ ಶಾಲೆಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಾನೆ. 2 ನೇ ವಾದಿ ಬಸಮ್ಮ ಇವಳ ಸಾಕ್ಷಿಯನ್ನು ಮಾಡಿಸುತ್ತೇವೆ. ನಿಡಿಃ 1 ರಲ್ಲಿ ಬಸಮ್ಮನ ಹೆಬ್ಬೆಟ್ಟಿನ ಗುರುತು ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ತಾಯಿಗೆ ನಿಡಿಃ 1 ರಲ್ಲಿ ಬರೆದಿರುವ ವಿಷಯ ಗೊತ್ತಿದ್ದು, ಒಪ್ಪಿರುತ್ತಾಳೆ ಎಂದರೆ ಸರಿಯಲ್ಲ. ನಿಡಿಃ 1 ರ ಬಗ್ಗೆ ವಾದ ಪತ್ರದಲ್ಲಿ ನಾವು ಏನು ಹೇಳಿಲ್ಲ ಕೇವಲ ಪರಿಹಾರದಲ್ಲಿ ಮಾತ್ರ ಹೇಳಿರುತ್ತೇವೆ ಎಂದರೆ ಸಾಕ್ಷಿ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನಮ್ಮ ತಾಯಿಗೆ ಅದರ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ತಾಯಿಗೆ ನಿಡಿಃ 1 ರ ಬಗ್ಗೆ ಮೊದಲಿನಿಂದಲೂ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿಡಿಃ 01 ರಲ್ಲಿ ನಮ್ಮ ತಾಯಿಗೆ ದಾವಾ ತಪಶೀಲಿನ 25 ನೇ ಆಸ್ತಿಯನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸದರಿ ವಿಲ್ ನ್ನು ನೋಡುವ ಮೊದಲು ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನಮ್ಮತಾಯಿಯ ಹೆಸರಿಗೆ ಸದರಿ ಆಸ್ತಿಯ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ.

2 ನೇ ವಾದಿಗೆ ದಾವಾ ತಪಶೀಲಿನ 7 ನೇ ಆಸ್ತಿಯನ್ನು ನಿಡಿಃ 1 ರಲ್ಲಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಿಡಿಃ 1 ನ್ನು ನೋಡಿದಾಗಲೇ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಸ ದರಿ ಆಸ್ತಿ ಸಣ್ಣ ತಿಮ್ಮಪ್ಪನ ಹೆಸರಿನಲ್ಲಿ ಇರುತ್ತದೆ ಎನ್ನುವುದು ನಿಜ. ಸದರಿ ಆಸ್ತಿಯನ್ನು 2 ನೇ ವಾದಿ ಹಣ ಪಡೆದು ಸಣ್ಣತಿಮ್ಮಪ್ಪನಿಗೆ ಬಿಟ್ಟುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ತಿಮ್ಮಪ್ಪ ಇವನಿಗೆ ಸರ್ವೇ ನಂ. 79 ರಲ್ಲಿ 2 ಎಕರೆ 10 ಗುಂಟೆ, 86 ರಲ್ಲಿ 1 ಎಕರೆ, 87 ರಲ್ಲಿ 20 ಗುಂಟೆ, ಚನ್ನಸಮ್ರುದ ಸರ್ವೆ ನಂ. 36 ರಲ್ಲಿ 28 ಗುಂಟೆ, ಮಳಲಿ ಸರ್ವೇ ನಂ. 253 ರಲ್ಲಿ 1 ಎಕರೆ 1 ಗುಂಟೆ ಇವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಪಹಣಿಗಳು

ಸಿಕ್ಕಿರಲಿಲ್ಲ ಎಂದು ಹೇಳುತ್ತಾರೆ. ತಿಮ್ಮಪ್ಪನ ಮಕ್ಕಳನ್ನು ಈ ದಾವೆಯಲ್ಲಿ 9 ರಿಂದ 11 ನೇ ಪ್ರತಿವಾದಿಗಳನ್ನಾಗಿ ಮಾಡಿರುತ್ತದೆ ಎನ್ನುವುದು ನಿಜ. 9 ರಿಂದ 11 ನೇ ಪ್ರತಿವಾದಿಗಳು ತಮ್ಮ ತಂದೆ ತಿಮ್ಮಪ್ಪನ ಭಾಗದ ಮೇಲೆ ಹೇಳಿದ ಆಸ್ತಿಗಳನ್ನು ನೊಂದಾಯಿತ ಪಾಲು ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಾದ ನಂತರ ಆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರ್ಪಡೆಗೊಳಿಸಲು ಪ್ರಯತ್ನ ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಮ್ಮ ಅಜ್ಜ ಬೋಗಪ್ಪನ ಹೆಂಡತಿ ಚಿಕ್ಕವಯಸ್ಸಿನಲ್ಲಿ ಮೃತಪಟ್ಟಿರುತ್ತಾಳೆ ಎನ್ನುವುದು ಗೊತ್ತಿರುವುದಿಲ್ಲ. ಆ ಕಾರಣದಿಂದ ಊಟದ ಸಲುವಾಗಿ ಬೋಗಪ್ಪ ಸಣ್ಣತಿಮ್ಮಪ್ಪನನ್ನು ಆಶ್ರಯಿಸಿದ್ದ ಎಂದರೆ ಸಾಕ್ಷಿ ಮೂರು ಜನರು ಒಟ್ಟಿಗೆ ಇದ್ದರು ಎಂದು ಹೇಳುತ್ತಾರೆ. 1953 ರ ನಂತರ ತಿಮ್ಮಪ್ಪ, ಬೋಗಪ್ಪ, ಹನುಮಂತಪ್ಪ ಮತ್ತು ಸಣ್ಣತಿಮ್ಮಪ್ಪ ಇವರು ಆಸ್ತಿಗಳನ್ನು ಸಂಪಾದನೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟಿಗೆ ಇರುತ್ತಾರೆ ಎಂದು ಹೇಳುತ್ತಾರೆ.

ದಾವಾ 1 ರಿಂದ 67 ನೇ ಆಸ್ತಿಗಳನ್ನು ಯಾರು, ಯಾವಾಗ ಸಂಪಾದನೆ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ದಾವಾ ಅಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ 3, 6, 7, 8, 15, 22, 25, 27, 30 ರಿಂದ 38, 42, 55, 56, 60, 61, 64 ನೇ ಆಸ್ತಿಗಳು ಸಣ್ಣತಿಮ್ಮಪ್ಪನು ಸ್ವಯಾರ್ಜಿತವಾಗಿ ಖರೀದಿಸಿರುತ್ತಾನೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ 13, 16, 17, 26, 28, 31, 52, 53, 54, 57, 58, 59 ನೇ ಆಸ್ತಿಗಳನ್ನು ಹನುಮಂತಪ್ಪ ಸ್ವಯಾರ್ಜಿತವಾಗಿ ಖರೀದಿಸಿರುತ್ತಾನೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ಹನಮಂತಪ್ಪನ ಮಗ ರಾಮಪ್ಪ ಇವನು ದಾವಾ 14, 24, 29, 30, 39, 40, 56 ನೇ ಅಸ್ತಿಗಳನ್ನು ಸ್ವಯಾರ್ಜಿತವಾಗಿ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಬೋಗಪ್ಪ ಇವನು ಯಾವ್ಯಾವ ಆಸ್ತಿಗಳನ್ನು ಖರೀದಿಸಿದ್ದ ಎಂದು ಹೇಳಲು ಆಗುವುದಿಲ್ಲ. ಖರೀದಿ ಮಾಡಿರುವುದಕ್ಕೆ ಪತ್ರಗಳು ಮನೆಯಲ್ಲಿ ಇರುವುದಿಲ್ಲ. ಸದರಿ ಆಸ್ತಿಗಳ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಪಹಣಿಗಳಲ್ಲಿ ಯಾರ ಹೆಸರು

ಯಾವಾಗಿನಿಂದ ನಮೂದು ಇರುತ್ತದೆ ಎಂದು ಮಾಹಿತಿ ಇರುತ್ತದೆ. ನಾನು 1976 ರಲ್ಲಿ ಜನಿಸಿರುತ್ತೇನೆ. ನನ್ನ ಜನ್ಮದ ಮೊದಲು ನಮ್ಮ ಕುಟುಂಬದಲ್ಲಿನಡೆದ ಘಟನೆಯ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎನ್ನುವುದು ನಿಜ. ನಮ್ಮ ತಾತ ಕ್ಯಾನ್ಸರಾಗಿ 3 ವರ್ಷ ಬಳಲಿ ಮೃತಪಟ್ಟಿರುವುದಕ್ಕೆ ದಾಖಲೆ ಇರುವುದಿಲ್ಲ. ನಮ್ಮ ತಾತ ಬೋಗಪ್ಪ ಮೃತಪಡುವ ಸಮಯದಲ್ಲಿ ಅವನ ದೈಹಿಕ ಮತ್ತು ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದು ನಮ್ಮ ವಾದ ಪತ್ರದಲ್ಲಿ ಹೇಳಿರುತ್ತೇವೆ . ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಅವರ ಸ್ವಯಾರ್ಜಿತವಾದ ಆಸ್ತಿಗಳನ್ನು ಸೇರಿಸಿ ಮತ್ತು ಮೃತ್ಯುಪತ್ರದ ವಿಷಯ ಗೊತ್ತಿದ್ದರು ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಾತ 1975 ರಲ್ಲಿ ಮೃತಪಟ್ಟ ನಂತರ ಖಾತೆ ಮಾಡಿಸಲು ಅರ್ಜಿಯನ್ನುಕೊಟ್ಟಿದ್ದೀರ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಮ್ಮ ಸಂಬಂಧಿಕರು ವಕೀಲರು ಇರುತ್ತಾರೆ ಎನ್ನುವುದು ನಿಜ. ಸದರಿ ವಕೀಲರು 2 ನೇ ವಾದಿಯ ಮನೆಯಲ್ಲಿ ಬಾಡಿಗೆಗೆ ಇರುತ್ತಾರೆ ಎಂದರೆ ಸಾಕ್ಷಿ ಅವರ ಸ್ವಂತ ಮನೆಯಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ಸದರಿ ವಕೀಲರಿಗೆ ನಮ್ಮ ಚಿಕ್ಕಮ್ಮನ ಮಗಳನ್ನು ಕೊಟ್ಟಿರುತ್ತೇವೆ. 2 ನೇ ವಾದಿ ಈಗ ಹೊಸದುರ್ಗದಲ್ಲಿ ಬಂದು ವಾಸವಾಗಿರುತ್ತಾಳೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದು ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 9 ರಿಂದ 11 ನೇ ಪ್ರತಿವಾದಿಗಳ ಪರಃ 9 ರಿಂದ 11 ನೇ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ, ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.